# ದಾರಿ

**ನಾನು** ದಿನವೂ
ವಾಕಿಂಗ್ ಹೋಗುವ ದಾರಿಯ ಪಕ್ಕದಲ್ಲಿ
ಮುಂಗಾರಿನ ಹದ ಮಳೆಗೆ
ರಾಗಿ ಹೊಲ ಚಿಗುರಿ ನಿಂತಿತ್ತು
ಅವಳು ಕೈಬಳೆಗಳ ಸದ್ದುಮಾಡುತ್ತಾ
ಹಕ್ಕಿಗಳ ಓಡಿಸುತ್ತಿದ್ದಳು
ಆಗಷ್ಟೇ ಕಿತ್ತ ಕಡಲೇಕಾಯಿ
ನನ್ನ ಬೊಗಸೆಗಷ್ಟು ಸುರಿದು ನಕ್ಕಾಗ ಅವಳು
ಹಟಮಾರಿ ಹಕ್ಕಿಗಳು ಮತ್ತೆಮತ್ತೆ
ಚಿಲಿಪಿಲಿ ಹಾರಾಡುತ್ತಲೇ ಇದ್ದವು.

ಎಷ್ಟೋ ದಿನಗಳ ಮೇಲೆ ಮತ್ತೆ ನಾನು ವಾಕಿಂಗ್ ಹೋದಾಗ
ಈ ಬಾರಿ ಮಳೆ ಬಂದಿರಲಿಲ್ಲ
ದಾರಿ ಪಕ್ಕದ ಹೊಲಗಳಲ್ಲಿ ಗೋರಿಗಳು ಚಿಗುರಿದ್ದವು
ಅವಳೊಂದು ಗೋರಿಯ ಮುಂದೆ
ದೀಪ ಹಚ್ಚಿ ನಮಸ್ಕರಿಸುತ್ತಿದ್ದಳು
ಕೈಬಳೆಯ ಸದ್ದಿಲ್ಲ... ನಾನೂ ಮಾತಾಡಲಿಲ್ಲ
ಹಕ್ಕಿಗಳು ಅಲ್ಲಿ ಇಲ್ಲಿ ಏನೊ ಹುಡುಕಿಕೊಂಡಿದ್ದವು

ನಾನು ವಾಕಿಂಗ್ ಹೋಗುತ್ತಲೇ ಇದ್ದೆ
ಬೇಲಿಯಾಚೆಯ ಹೊಲದ ತುಂಬಾ
ಉದ್ದುದ್ದ ಅಡ್ಡಡ್ಡ ರಸ್ತೆಗಳಾಗುತ್ತಿದ್ದವು
ಕೆಂಪನೆಯ ಬಣ್ಣ ಬಳಿದುಕೊಂಡ ಗುರುತು ಕಲ್ಲುಗಳು
ವಿದ್ಯುತ್ ಕಂಬಗಳು ಅಲ್ಲಲ್ಲಿ ಎದ್ದು ನಿಂತಿದ್ದವು
ಬಿಳಿಯ ಕಾರಿನಿಂದ ಉಬ್ಬಿದ ಹೊಟ್ಟೆಯ ಜನರು ಇಳಿಯುತ್ತಿದ್ದರು



ಬೇಲಿಯ ಪಕ್ಕದಲ್ಲಿ ಕುಳಿತು ಅಳುತ್ತಿದ್ದಳು ಅವಳು
ಒತ್ತೊತ್ತಿ ಬರುತ್ತಿದ್ದ ದುಃಖ ಸೆರಗಿನಲಿ ಹತ್ತಿಕ್ಕಿ
ಮುರಿದ ಸಮಾಧಿಗಳ ಗುರುತು ಹುಡುಕುತ್ತಾ ಅವಳು
ನನ್ನೊಡನೆ ಸುದ್ದಿ ಹೇಳುವಾಗ
ಹಕ್ಕಿಗಳ ಸುಳಿವಿರಲಿಲ್ಲ
ಎಲ್ಲಾ ಹಾರಿ ಹೋಗಿದ್ದವು